ಸಾಕ್ಷಿ ಯನ್ನು ದಿಃ02.04.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ**

1. ನೀವು ದೂರುದಾರ ಸಂಸ್ಥೆಯಲ್ಲಿ ನಾನು ಒಂದೇ ಚೀಟಿ ಮಾತ್ರ ಹಾಕಿರುತ್ತೇನೆ.
2. 1 ಲಕ್ಷ ಮೊತ್ತಕ್ಕೆ ಸಂಬಂಧಪಟ್ಟಂತೆ ಚೀಟಿ ಹಾಕಿದ್ದೀರಾ ಎಂದರೆ ಇಲ್ಲ.
3. 3 ಲಕ್ಷದ ಚೀಟಿಯಲ್ಲಿ ನಾನು 2 ಲಕ್ಷ 51 ಸಾವಿರ ಬಿಡ್ ಮಾಡಿದ್ದೆ. ಬಿಡ್ ಮೊತ್ತ 49 ಸಾವಿರ. ಬಿಡ್ ಮಾಡಿದ ನಂತರ ಸದರಿ ಚೀಟಿ ಹಣ ನೀವು ಪಡೆದ್ದೀರಿ ಎಂದರೆ ಸರಿ.
4. ದಿಃ 01.08.2020 ರಂದು 50 ಸಾವಿರ ಬಾಕಿ ಕಟ್ಟಬೇಕಾಗಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ನಿಮ್ಮನ್ನು ಸಂಪರ್ಕಿಸಿದಾಗ ನೀವು ನಿಮ್ಮ ಖಾತೆಯಲ್ಲಿ 50 ಸಾವಿರ ಹಣ ಇದ್ದು ಅದನ್ನು ನಗದೀಕರಿಸಿಕೊಳ್ಳುವಂತೆ ದಿಃ08.12.2023 ರಂದು ನಿಪಿ -1ರ ಚೆಕ್ಕನ್ನು ನೀಡಿದ್ದೀರಾ ಎಂದರೆ ಸರಿಯಲ್ಲ.
5. ದಿಃ 20.06.2020 ರಂದು ನೀವು ಕೊನೆ ಕಂತು 11 ಸಾವಿರ 348 ಹಣ ಕಟ್ಟಬೇಕಿತ್ತು ಎಂದರೆ ಸರಿಯಲ್ಲ. ಅದಕ್ಕಿಂತ ಹಿಂದೆ 38 ಸಾವಿರದ 652 ಬಾಕಿ ಇತ್ತು ಎಂದರೆ ಅದನ್ನು ನಾನು ಪಾವತಿ ಮಾಡಿರುತ್ತೇನೆ. ಒಟ್ಟು 50 ಸಾವಿರಕ್ಕೆ ನೀವು ನಿಪಿ - 1ರಚೆಕ್ ನೀಡಿದ್ದೀರಾ ಎಂದರೆ ಸರಿಯಲ್ಲ.
6. ದಿಃ 09.01.2024 ರಂದು ಚೆಕ್ ಬೌನ್ಸ್ ಆದ ಬಗ್ಗೆ ನಿಮಗೆ ನೊಟೀಸು ನೀಡಿದ್ದಾರೆ ಎಂದರೆ ನನ್ನ ಪತ್ನಿ ಸ್ವೀಕರಿಸಿರುತ್ತಾರೆ.
7. ನಿಪಿ-5ರಲ್ಲಿರುವ ಸಹಿ ನನ್ನದು. ಸದರಿ ನೊಟೀಸನ್ನು ನೀವೇ ಖುದ್ದಾಗಿ ಪಡೆದಿದ್ದೀರಾ ಎಂದರೆ ಸರಿಯಲ್ಲ.
8. ಸದರಿ ನೊಟೀಸಿಗೆ ನೀವು ಪ್ರತ್ಯುತ್ತರ ಲಿಖಿತವಾಗಿ ನೀಡಿಲ್ಲ ಆದರೆ ಮೌಖಿಕವಾಗಿ ಹೋಗಿ ಕೇಳಿರುತ್ತೇನೆ. ಆ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
9. ನೀವು ಕಟ್ಟುವ ಕಂತಿನ ಹಣದ ಎಲ್ಲಾ ರಶೀದಿಗಳನ್ನು ನಿಮಗೆ ನೀಡುತ್ತಿದ್ದರು ಎಂದರೆ, ಕೆಲವೊಂದು 4 ಕಂತಿಗೆ ರಶೀದಿ ಇಲ್ಲ ಎಂದು ನುಡಿಯುತ್ತಾರೆ.
10. ನೀವು ಚೀಟಿ ಹಣ 3 ಲಕ್ಷ ಪೂರ್ತಿ ಕಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
11. ನಾನು ಕಂತಿನ ಹಣವನ್ನು ನಗದು ಮೂಲಕ ಕಟ್ಟಿರುತ್ತೇನೆ.

12. ನಾನು 15 ಸಾವಿರದಂತೆ 16 ಕಂತುಗಳನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ.
13. ಸಂಸ್ಥೆಯವರು ಬಿಡ್ ಮೊತ್ತವನ್ನು ಷೇರುದಾರರಿಗೆ ಹಂಚಿ ಸದರಿ ಷೇರು ಹಣ ಕಳೆದು ಉಳಿಕೆ ಹಣ ಮಾತ್ರ ಕಟ್ಟಿಸಿಕೊಳ್ಳುತ್ತಾರೆ ಎಂದರೆ ಸರಿ.
14. ಪ್ರತಿ ತಿಂಗಳು 15 ಸಾವಿರ ಹಣ ಕಟ್ಟದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
15. ಚೀಟಿ ಪಡೆಯುವಾಗ ಯಾವುದೇ ಪ್ರೊನೋಟ್ ಹಾಗೂ ಚೆಕ್ ಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ.
16. ಒಟ್ಟು 20 ತಿಂಗಳ ಕಂತನ್ನು ನೀವು ಕಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
17. ನೀವು 50 ಸಾವಿರ ಹಣ ಕಟ್ಟಲು ವಿಫಲರಾಗಿದ್ದು, ಅದನ್ನು ಕಟ್ಟಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ